ವಿಶ್ವವಿದ್ಯಾಲಯದಿಂದ ಪದವೀಧರನಾದವನಿಗೆ 1889ರಲ್ಲಿ ರೋಮ್‌ನಲ್ಲಿ ಉನ್ನತ ಶಿಕ್ಷಣ ಪಡೆಯಲು ಒಂದು ವಿದ್ಯಾರ್ಥಿವೇತನ ದೊರೆಯಿತು. ಅಲ್ಲಿಂದ ಹಿಂತಿರುಗಿದ ಮೇಲೆ ಸೋರ್ಬೋನ್ ವಿಶ್ವವಿದ್ಯಾಲಯದಲ್ಲಿ ಸಂಗೀತದ ಇತಿಹಾಸವನ್ನು ಬೋಧಿಸಿದ.

ಆಜೀವಪರ್ಯಂತ ಸಂಗೀತಪ್ರಿಯನಾಗಿಯೇ ಉಳಿದಿದ್ದವನು ರೋಮೆ ರೋಲಾ. ತಾರುಣ್ಯದಲ್ಲಿರುವಾಗ ವಾಗ್ಗೇಯಕಾರನಾಗಬೇಕೆಂದು ಪ್ರಯತ್ನಿಸಿದರೂ ಅವನು ರೂಪುಗೊಂಡದ್ದು ಒಬ್ಬ ಒಳ್ಳೆಯ ಪಿಯಾನೊ ವಾದಕನಾಗಿ; ಸಂಗೀತ ಚರಿತ್ರೆಯ ಅಧ್ಯಯನವನ್ನು ವಿಶ್ವವಿದ್ಯಾಲಯ ಹಂತದಲ್ಲಿ ಪ್ರೋತ್ಸಾಹಿಸಿದ ಅಗ್ರಮಾನ್ಯನಾಗಿ. ಅವನು ಸಂಗೀತದಲ್ಲಿ ಶಕ್ತಿ, ಸಮಾಧಾನ, ಸ್ಫೂರ್ತಿಗಳ ಒಂದು ಆತ್ಮೀಯ ಸ್ರೋತವಿದೆಯೆಂದು ನಂಬಿದ್ದ.

ಎರಡನೆಯ ಮಹಾಯುದ್ಧ ಕಾಲದಲ್ಲಿ ಸ್ವಿಟ್ಜರ್ಲೆಂಡಿನಲ್ಲಿದ್ದ ರೋಲಾ ಫ್ಯಾಸಿಸಮ್ಮಿನ ವಿರುದ್ಧ ದನಿಯೆತ್ತಿದ; ಶಾಂತಿಗಾಗಿ ಅಮೆರಿಕದ ಮತ್ತು ರಷ್ಯದ ಧೀಮಂತರನ್ನು ಪ್ರೇರೇಪಿಸಿದ; ಟಾಲ್‌ಸ್ಟಾಯಿಯ ವಿಚಾರಗಳಿಂದ ಪ್ರಭಾವಿತನಾಗಿ ಅವನ ಜೊತೆ ಪತ್ರ ಸಂಪರ್ಕ ಇಟ್ಟುಕೊಂಡ. ಮಹಾತ್ಮ ಗಾಂಧಿ, ರವೀಂದ್ರನಾಥ ಟಾಗೋರ್ ಕೂಡ ಅವನ ಸ್ನೇಹವಲಯದಲ್ಲಿದ್ದರು.

ಭಾರತೀಯ ತತ್ತ್ವದರ್ಶನದಿಂದಲೂ ಪ್ರಭಾವಿತನಾಗಿದ್ದ ರೋಲಾ, ರಾಮಕೃಷ್ಣ ಪರಮಹಂಸರ ಬಗ್ಗೆ, ವಿವೇಕಾನಂದರ ಬಗ್ಗೆ, ಮಹಾತ್ಮ ಗಾಂಧಿಯವರ ಬಗ್ಗೆ ಪುಸ್ತಕಗಳನ್ನು ಬರೆದು ಪ್ರಕಟಿಸಿದ. ಮಹಾತ್ಮ ಗಾಂಧಿಯವರು 1931ರಲ್ಲಿ ಸ್ವಿಟ್ಜರ್ಲೆಂಡಿನಲ್ಲಿ ಅವನನ್ನು ಭೇಟಿಮಾಡಿದರು. ಆಗ ಅವನು ಶ್ರೇಷ್ಠ ಸಂಗೀತಕ್ಕಿರುವ ಸಂವಹನ ಶಕ್ತಿಯನ್ನು, ಅದು ವಿವಿಧ ಜನಾಂಗಗಳನ್ನು ಹೇಗೆ ಒಟ್ಟುಗೂಡಿಸಬಲ್ಲುದೆಂಬುದನ್ನು ತೋರಿಸಿಕೊಡುವುದಕ್ಕಾಗಿಯೇ ಪಿಯಾನೋದಲ್ಲಿ ಬೀಥೋವನ್ನನ 'ಫಿಫ್ತ್ ಸಿಂಫನಿ'ಯ ನಿಧಾನ ಗತಿಯನ್ನು ನುಡಿಸಿ ತೋರಿಸಿದ. ಅದಕ್ಕೆ ಮಹಾತ್ಮರ ಪ್ರತಿಕ್ರಿಯೆ: "ನೀವು ಹೇಳುತ್ತಿರುವುದರಿಂದ ಸಂಗೀತಕ್ಕೆ ಅಂಥ ಶಕ್ತಿ ಇದ್ದರೂ ಇರಬಹುದೇನೊ."

ಇಲ್ಲಿ ಕುಮಾರ್ ಪ್ರಸಾದ್ ಮುಖರ್ಜಿ ಬರೆದ "ದಿ ಲಾಸ್ಟ್ ವರ್ಲ್ಡ್ ಆಫ್ ಹಿಂದುಸ್ತಾನಿ ಮ್ಯೂಸಿಕ್" ಎಂಬ ಗ್ರಂಥವನ್ನು ಪ್ರಸ್ತಾಪಿಸಬೇಕು. ಅದರಲ್ಲಿರುವ ಒಂದು ಪ್ರಸಂಗ 1930ರ ದಶಕದಲ್ಲಿ ಮುಂಬಯಿಯಲ್ಲಿ ನಡೆದ ಬಹುದೊಡ್ಡ ಸಂಗೀತಗಾರರೊಬ್ಬರ ಚೇಂಬರ್ ಮ್ಯೂಸಿಕ್ಕಿಗೆ ಸಂಬಂಧಪಟ್ಟದ್ದು. ಗಾಂಧಿಯವರಿಗೆ ಗೊತ್ತಿದ್ದ ಯಾರೋ ಅವರನ್ನು ಆ ಚೇಂಬರ್ ಮ್ಯೂಸಿಕ್ಕಿಗೆ ಆಹ್ವಾನಿಸಿದರಂತೆ. ಗಾಂಧಿಯವರು ತಮ್ಮ ಹರಿಜನ ಕಲ್ಯಾಣ ನಿಧಿಗೆ ಹಣ ಸಂಗ್ರಹಿಸಲು ಅವಕಾಶ ಕೊಟ್ಟರೆ ಮಾತ್ರ ತಾವು ಆ ಆಹ್ವಾನವನ್ನು ಒಪ್ಪಿಕೊಳ್ಳುವುದಾಗಿ ಹೇಳಿದರಂತೆ. ಸಂಗೀತ ಕಛೇರಿಯ ಆಯೋಜಕರು ಒಪ್ಪಿದರು.

ಒಂದು ಸಣ್ಣ ಹಾಲಿನಲ್ಲಿ ಮೂವತ್ತು ನಲವತ್ತು ಮಂದಿ ಶ್ರೋತೃಗಳು ದಿಂಬುಗಳಿಗೆ ಒರಗಿಕೊಂಡು ಕುಳಿತಿದ್ದರು. ಮೊದಲ ಸಾಲಿನಲ್ಲೇ ಒಂದು ಗೋಲಕವನ್ನು ಹಿಡಿದುಕೊಂಡು ಕುಳಿತಿದ್ದ ಗಾಂಧಿ ಸಂಗೀತಗಾರರು ರಾಗಾಲಾಪ ಶುರುಮಾಡಿದ್ದೇ ಮೇಲೆದ್ದು ಪ್ರತಿಯೊಬ್ಬ ಶ್ರೋತೃವಿನ ಬಳಿಗೂ ಹೋಗಿ ಅವರ ಮುಂದೆ ತಮ್ಮ ಗೋಲಕವನ್ನು ಹಿಡಿದರು; ಗೋಲಕಕ್ಕೆ ಎಂಟಾಣೆಯೋ ಒಂದು ರೂಪಾಯಿಯೋ ಬಿದ್ದ ಮೇಲೆ ತಮ್ಮ ಸ್ವಸ್ಥಾನಕ್ಕೆ ಹಿಂತಿರುಗಿದರು. ಹತ್ತು ನಿಮಿಷ ಆದ ಮೇಲೆ ಮತ್ತೆ ಮೇಲೆದ್ದು ಶ್ರೋತೃಗಳ ಮುಂದೆ ಹೋದರು; ಗೋಲಕಕ್ಕೆ ಹಣ ಬಿದ್ದ ಮೇಲೆ ತಮ್ಮ ಜಾಗಕ್ಕೆ ಹಿಂತಿರುಗಿದರು. ಹೀಗೆ ಹತ್ತು ನಿಮಿಷಕ್ಕೊಮ್ಮೆ ನಡೆದ ಆ ಧನಸಂಗ್ರಹದ ವೈಖರಿ ಇಡೀ ಮೆಹಫಿಲ್ಲನ್ನೇ ಹಾಳುಮಾಡಿತಂತೆ.

ಗಾಂಧೀಜಿಯವರಿಗೆ ಸಂಗೀತಾಸ್ವಾದನೆಗಿಂತ ಹರಿಜನ ಕಲ್ಯಾಣವೇ ಮುಖ್ಯವಾಗಿದ್ದದ್ದು ಸಹಜವೇ. ಆದರೆ ರೋಮೆ ರೋಲಾಗೆ ಹಾಗಲ್ಲ. ತಾರುಣ್ಯದ ಭಾವೋನ್ಮಾದದಲ್ಲಿ ತನ್ನ ತಾಯಿಯ ಜೊತೆ